PRESS INFORMATION BUREAU
GOVERNMENT OF INDIA
BENGALURU
****

| Name of the Paper | Udaya Vani |
|---|---|
| Language: Kannada | Date 13-08-18 |
| Place :Bangalore | Periodicity: Daily |
| Clipping on_ expectations of public from PM speech on Ind. Day | |
| Headline_ everybody looking at Independence day speech, PM Modi may announce gift of bumper benefits | |

# ಜನಕ್ಕೆ ಬರುತ್ತಾ ಧನ?

## ಆ.15ರ ಭಾಷಣದಲ್ಲಿ ಮೋದಿ ಬಂಪರ್ ಘೋಷಣೆ ಸಾಧ್ಯತೆ

## ಸ್ವಾತಂತ್ರ್ಯೋತ್ಸವ ದಿನದ ಭಾಷಣದ ಮೇಲೆ ಎಲ್ಲರ ಕಣ್ಣು

ನವದೆಹಲಿ: ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಸ್ವಾತಂತ್ರ್ಯೋತ್ಸವ ದಿನದಂದು 32 ಕೋಟಿ ಜನಧನ ಖಾತೆದಾರರಿಗೆ ಓವರ್‌ಡ್ರಾಫ್ಟ್ ಸೌಲಭ್ಯ ಹಾಗೂ ಇತರ ಹಲವು ಸೌಲಭ್ಯಗಳನ್ನು ಘೋಷಿಸುವ ಸಾಧ್ಯತೆಯಿದೆ.



### ಪಿಂಚಣಿ, ವಿಮೆ ಮೊತ್ತ ಹೆಚ್ಚಳ

### 8 ಸಾವಿರ ಪ್ರತಿಕ್ರಿಯೆ

### ಆಯುಷ್ಮಾನ್ ಭಾರತ

### ಒಂದೇ ಒಂದು ಬುಲೆಟ್ ಫೈರ್ ಆಗಿಲ್ಲ

PRESS INFORMATION BUREAU
GOVERNMENT OF INDIA
BENGALURU
****

| | | |
|---|---|---|
| Name of the Paper | Kannada Prabha | |
| Language: Kannada | | Date 13-08-18 |
| Place :Bangalore | Periodicity: Daily | |
| Clipping on_ expectations of public from PM speech on Ind. Day | | |
| Headline_on Independence day , PM Modi will give Health – Wealth gift | | |

# ಸ್ವಾತಂತ್ರ್ಯ ದಿನಕ್ಕೆ ಮೋದಿ ಹೆಲ್ತ್-ವೆಲ್ತ್ ಕೊಡುಗೆ

## ಜನಧನ, ಅಪಘಾತ ವಿಮೆ, ಪಿಂಚಣಿ ಮಿತಿ ಏರಿಕೆ ಸಂಭವ

## ಕೆಂಪುಕೋಟೆ ಮೇಲೆ ಮೋದಿ ಸರ್ಕಾರದ ಕೊನೆ ಭಾಷಣ

**ನವದೆಹಲಿ:** ಇದೇ ಆಗಸ್ಟ್ 15ರಂದು ದಿಲ್ಲಿಯ ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜಾರೋಹಣ ನೆರವೇರಿಸಿ ದೇಶವನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಈ ಅವಧಿಯ ಕೊನೆಯ ಭಾಷಣ ಮಾಡಲಿದ್ದಾರೆ. ಈ ವೇಳೆ ಅವರು ಹಲವಾರು ಆರ್ಥಿಕ ಮತ್ತು ಆರೋಗ್ಯ ಕೊಡುಗೆಗಳನ್ನು ಪ್ರಕಟಿಸುವ ಸಾಧ್ಯತೆ ಇದೆ.



ಮೋದಿ ಅವರು 32 ಕೋಟಿ ಜನಧನ ಖಾತೆದಾರರಿಗೆ ಕೆಲವು ಆರ್ಥಿಕ ನೆರವು ಪ್ರಕಟಿಸುವ ನಿರೀಕ್ಷೆಯಿದೆ. ಪ್ರಧಾನ ಮಂತ್ರಿ ಜನಧನ ಯೋಜನೆಯ ಖಾತೆದಾರರಿಗೆ 'ಓವರ್‌ಡ್ರಾಫ್ಟ್' ಮಿತಿಯನ್ನು 10 ಸಾವಿರ ರುಪಾಯಿಗೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ. ಈಗ ಇದರ ಮಿತಿ 5 ಸಾವಿರ ರುಪಾಯಿ ಇತ್ತು.

ಇದೇ ವೇಳೆ, ರುಪೇ ಕಾರ್ಡ್‌ದಾರರಿಗೆ ಉಚಿತ ಅಪಘಾತ ವಿಮೆಯ ಮಿತಿಯನ್ನು 1 ಲಕ್ಷ ರು.ಗೆ ಹೆಚ್ಚಿಸುವ ಘೋಷಣೆ ಮಾಡುವ ನಿರೀಕ್ಷೆಯಿದೆ ಎಂದೂ ಮೂಲಗಳು ತಿಳಿಸಿವೆ.

ಜನಧನ ಯೋಜನೆಯ 2ನೇ ಹಂತ ಇದೇ ಆ.15ರಂದು ಮುಗಿಯಲಿದೆ. ಅದು ಹೀಗಾಗಿ ಯೋಜನೆಯನ್ನು ಇನ್ನೊಂದು ಹಂತಕ್ಕೆ ಕೊಂಡೊಯ್ಯುವ ಉದ್ದೇಶ ಸರ್ಕಾರಕ್ಕಿದೆ. 2014ರ ಆಗಸ್ಟ್‌ನಲ್ಲಿ ಜನಧನ ಯೋಜನೆ ಹಮ್ಮಿಕೊಳ್ಳಲಾಗಿತ್ತು. 2015ರಲ್ಲಿ ಯೋಜನೆಯ ಮೊದಲ ಹಂತ ಮುಗಿದಿತ್ತು. ಈ 4 ವರ್ಷಗಳಲ್ಲಿ 32.35 ಕೋಟಿ ಜನಧನ ಖಾತೆಗಳನ್ನು ಸೃಷ್ಟಿಸಲಾಗಿದ್ದು, ಇದರಲ್ಲಿ 80,674.82 ಕೋಟಿ ರು. ಸಂಗ್ರಹವಾಗಿದೆ.

**ಅಟಲ್ ಪಿಂಚಣಿ:** ಈ ನಡುವೆ ಅಟಲ್ ಪಿಂಚಣಿ ಯೋಜನೆಯ ಮಿತಿಯನ್ನು 5 ಸಾವಿರ ರು.ನಿಂದ 10 ಸಾವಿರ ರು.ವರೆಗೆ ಹೆಚ್ಚಿಸುವ ಘೋಷಣೆಯನ್ನು ಪ್ರಧಾನ ಮಂತ್ರಿಗಳು ಕೆಂಪುಕೋಟೆಯ ಮೇಲೆ ಮಾಡುವ ಸಾಧ್ಯತೆ ಇದೆ. ಈಗ 1000 ರು.ನಿಂದ 5000 ರು.ವರೆಗೆ 60 ವರ್ಷ ಮೇಲ್ಪಟ್ಟವರಿಗೆ ಅಟಲ್ ಪಿಂಚಣಿ ಲಭಿಸುತ್ತದೆ. ಪ್ರೀಮಿಯಂ ಕಂತಿನ ಮೊತ್ತ ಆಧರಿಸಿ 1ರಿಂದ 5 ಸಾವಿರ ರು.ವರೆಗೆ ವ್ಯತ್ಯಾಸವಾಗುತ್ತಿರುತ್ತದೆ.

**ವಿಮಾ ಯೋಜನೆ:** ಇದೇ ವೇಳೆ ದೇಶದ 10 ಕೋಟಿ ಕುಟುಂಬಗಳ 50 ಕೋಟಿ ಜನರಿಗೆ ಆರೋಗ್ಯ ವಿಮೆ ಒದಗಿಸುವ ವಿಶ್ವದ ಅತಿದೊಡ್ಡ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸುವ ಸಾಧ್ಯತೆ ಇದೆ. ಈ ಯೋಜನೆಯಡಿ ಕುಟುಂಬವೊಂದಕ್ಕೆ 5 ಲಕ್ಷ ರು. ಮೌಲ್ಯದ ಆರೋಗ್ಯ ವಿಮೆ ಒದಗಿಸಲಾಗುವುದು.


ಸ್ವಾತಂತ್ರ್ಯ ದಿನಾಚರಣೆಗೆ ಸಿದ್ಧವಾಗುತ್ತಿರುವ ಕೆಂಪುಕೋಟೆ.

### ನಿರೀಕ್ಷಿತ ಘೋಷಣೆಗಳು

- ಜನಧನ ಖಾತೆಯ ಓ.ಡಿ. ಮಿತಿ 10 ಸಾವಿರಕ್ಕೆ ಹೆಚ್ಚಳ
- ರುಪೇ ಡೆಬಿಟ್ ಕಾರ್ಡುದಾರರಿಗೆ ಇರುವ ಅಪಘಾತ ವಿಮೆ ಮಿತಿಯನ್ನು 1 ಲಕ್ಷ ರುಪಾಯಿಗೆ ಏರಿಕೆ
- ಅಟಲ್ ಪಿಂಚಣಿ ಯೋಜನೆ ಮಿತಿ 10 ಸಾವಿರಕ್ಕೇರಿಕೆ
- ವಿಶ್ವದ ಅತಿದೊಡ್ಡ ಆರೋಗ್ಯ ವಿಮಾ ಯೋಜನೆ ಮೋದಿ ಕೇರ್‌ಗೆ ಚಾಲನೆ

PRESS INFORMATION BUREAU

GOVERNMENT OF INDIA
BENGALURU
****

| | | |
|---|---|---|
| Name of the Paper | Vijaya Karnataka | |
| Language: Kannada | | Date 13-08-18 |
| Place :Bangalore | Periodicity: Daily | |
| Clipping on_ expectations of public from PM speech on Ind. Day | | |
| Headline_ PM may announce major financial empowerment plans for poor | | |

ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಒತ್ತು

# ಆ.15ಕ್ಕೆ ಪ್ರಧಾನಿಯಿಂದ ಮಹತ್ವದ ಘೋಷಣೆ?

**ಹೊಸದಿಲ್ಲಿ :** ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ದೇಶದಲ್ಲಿನ ಸುಮಾರು 32 ಕೋಟಿ ಜನ್‌ಧನ್ ಖಾತೆದಾರರೂ ಸೇರಿದಂತೆ ಜನ ಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಒತ್ತು ನೀಡುವ ನಿರೀಕ್ಷೆ ಇದೆ. ಆರ್ಥಿಕ ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ಮಹತ್ವದ ಘೋಷಣೆಗಳು ಹೊರಬೀಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

**ಓವರ್ ಡ್ರಾಫ್ಟ್ ಮೊತ್ತ ದ್ವಿಗುಣ**

ಪ್ರಧಾನ ಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ) ಖಾತೆದಾರರಿಗೆ ಈಗಿರುವ ಓವರ್‌ಡ್ರಾಫ್ಟ್ ಸೌಲಭ್ಯವನ್ನು ದ್ವಿಗುಣಗೊಳಿಸುವ (ಅಂದರೆ 10,000 ರೂ.ಗೆ ಏರಿಕೆ) ಸಾಧ್ಯತೆ ಇದೆ.

**ಅಪಘಾತ ವಿಮೆ ಮೊತ್ತ ಏರಿಕೆ**

ರುಪೇ ಕಾರ್ಡ್‌ದಾರರ ಅಪಘಾತ ವಿಮೆ ಮೊತ್ತವನ್ನು 1 ಲಕ್ಷ ದಿಂದ ಹೆಚ್ಚಿನ ಮೊತ್ತಕ್ಕೆ ಹೆಚ್ಚಿಸುವ ಘೋಷಣೆ ಪ್ರಧಾನಿಯಿಂದ ಹೊರಬೀಳಲಿದೆ ಎಂದು ಮೂಲಗಳು ಹೇಳಿವೆ.



**ಪಿಂಚಣಿ ಶ್ರೇಣಿ 5ರಿಂದ 10 ಸಾವಿರಕ್ಕೆ ವಿಸ್ತರಣೆ**

ಅಟಲ್ ಪಿಂಚಣಿ ಯೋಜನೆಯ(ಎಪಿವೈ) ಗರಿಷ್ಠ ಮಿತಿಯ ಶ್ರೇಣಿಯನ್ನು ಈಗಿನ 5 ಸಾವಿರ ರೂ.ನಿಂದ 10 ಸಾವಿರ ರೂ.ಗೆ ಏರಿಕೆ ಮಾಡಬಹುದು. ಆ.15ರಂದು ಈ ಘೋಷಣೆಯನ್ನು ಪ್ರಧಾನಿ ಮಾಡಲಿದ್ದಾರೆ ಎನ್ನಲಾಗಿದೆ. ಅಸಂಘಟಿತ ವಲಯದ ಉದ್ಯೋಗಿಗಳಿಗೆ ನಿವೃತ್ತಿಗೆ ಅನುಕೂಲವಾಗುವಂತೆ ಸರಕಾರವು ಪಿಂಚಣಿ ಪ್ರಯೋಜನದ ಈ ವೈಯಕ್ತಿಕ ಉಳಿತಾಯ ಯೋಜನೆಯನ್ನು ಆರಂಭಿಸಿತ್ತು. ಕನಿಷ್ಠ 1,000ದಿಂದ ಗರಿಷ್ಠ 5,000 ರೂ. ತನಕ ಪಿಂಚಣಿ ಪಡೆಯಲು ಅನುಕೂಲವಾಗುವಂತೆ ಎಪಿವೈ ರೂಪುಗೊಂಡಿದೆ.

ಪಿಎಂಜೆಡಿವೈ 2ನೇ ಹಂತವು ಆ.15ಕ್ಕೆ ಮುಕ್ತಾಯವಾಗಲಿದ್ದು, ಹೊಸ ಗುರಿಗಳನ್ನು ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿ ಪ್ರಕಟಿಸಬಹುದು. 2014ರ ಆಗಸ್ಟ್‌ನಲ್ಲಿ ಆರಂಭವಾದ ಪಿಎಂಜೆಡಿವೈನ ಮೊದಲ ಹಂತವು 2015ರ ಆಗಸ್ಟ್ 14ಕ್ಕೆ ಮುಗಿದಿದೆ. ಹೊಸ ಬ್ಯಾಂಕ್ ಖಾತೆಗಳ ತೆರೆಯುವುದು ಮತ್ತು ರುಪೆ ಡೆಬಿಟ್ ಕಾರ್ಡ್ ವಿತರಣೆಯ ಗುರಿಯನ್ನು ಹೊಂದಲಾಗಿತ್ತು. ಕಳೆದ 4 ವರ್ಷಗಳಲ್ಲಿ 32.25 ಕೋಟಿ ಖಾತೆಗಳನ್ನು ತೆರೆಯಲಾಗಿದ್ದು, 80,674 ಕೋಟಿ ರೂ. ಆರಂಭಿಕ ಬ್ಯಾಲೆನ್ಸ್ ಇತ್ತು.

**ಓವರ್ ಡ್ರಾಫ್ಟ್ ಮೊತ್ತ ಏರಿಕೆಯಾದರೆ ಅನುಕೂಲ**

ಒ.ಡಿ ಸೌಲಭ್ಯವನ್ನು 10,000 ರೂ.ಗೆ ಏರಿಕೆ ಮಾಡಿದರೆ, ಅನೇಕ ಗ್ರಾಹಕರಿಗೆ ಅನುಕೂಲವಾಗುತ್ತದೆ. ಜನ್‌ಧನ್ ಖಾತೆದಾರರು, ತಮ್ಮ ಖಾತೆಯಲ್ಲಿ ಹಣವಿಲ್ಲದಿದ್ದರೂ ಅಗತ್ಯವಿದ್ದಾಗ ರೂ.5,000ದವರೆಗೆ ಹಣ ಪಡೆಯಬಹುದು(ಓವರ್ ಡ್ರಾಫ್ಟ್-ಒ.ಡಿ). ಆದರೆ ಪ್ರತಿ ಕುಟುಂಬಕ್ಕೆ ಒಬ್ಬರಿಗೆ ಮಾತ್ರ ಈ ಅವಕಾಶ. ಕುಟುಂಬದ ಮಹಿಳಾ ಸದಸ್ಯರಿಗೆ ಆದ್ಯತೆ ನೀಡಲಾಗಿದೆ. ಸಕಾಲಕ್ಕೆ ಬಡ್ಡಿ ಸಮೇತ ಮರುಪಾವತಿ ಮಾಡಿದರೆ 5,000 ರೂ.ನ ಮಿತಿ ಹೆಚ್ಚಿಸಿಕೊಳ್ಳಬಹುದು. ಆದರೆ ಈ ಸೌಲಭ್ಯವು ಎಲ್ಲರಿಗೂ ಲಭ್ಯವಿಲ್ಲ. ಗ್ರಾಹಕರ ಖಾತೆ ನಿರ್ವಹಣೆ ತೃಪ್ತಿಕರವಾಗಿದ್ದರೆ ಮಾತ್ರ ಬ್ಯಾಂಕ್‌ಗಳು ಓವರ್ ಡ್ರಾಫ್ಟ್ ನೀಡುತ್ತವೆ. ಖಾತೆ ತೆರೆದ ಆರು ತಿಂಗಳ ನಂತರ ಈ ಸೌಲಭ್ಯ ಲಭ್ಯ.